*ಪಾಠ 1* **ಜೂನ್ 30-ಜುಲೈ 6*

# ನೀವು ನನಗೆ ಸಾಕ್ಷಿಗಳಾಗಿರುವಿರಿ



**ಸಬ್ಬತ್ತಿನ ಮಧ್ಯಾಹ್ನ:**

**ಈ ವಾರದ ಪಾಠದ ಅಧ್ಯಯನಕ್ಕಾಗಿ** ಅ.ಪೋ 1:6-8, ಲೂಕ 24:25, ಲೂಕ 24:44-48, ಧರ್ಮೋಪದೇಶಕಾಂಡ 19:15, ಅ.ಪೋ. 1:9-26, ಜ್ಞಾನೋಕ್ತಿಗಳು 16:33.

**ಸ್ಮರಣ ವಾಕ್ಯ**: **"ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರುಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು. (ಅ ಪೋ ಕೃ 1:2)**

ಯೇಸುವಿನ ಭೂಲೋಕದ ಸೇವೆಯು ಸಂಪೂರ್ಣವಾಗಿತ್ತು. ದೇವರು ಅತೀ ಶೀಘ್ರದಲ್ಲಿ ಪವಿತ್ರಾತ್ಮನನ್ನು ಕಳುಹಿಸಿ ಲೋಕದ ಕಟ್ಟ ಕಡೆಯವರೆಗೂ ಸುವಾರ್ತೆಯನ್ನು ಸಾರುವುದಕ್ಕಾಗಿ ಶಿಷ್ಯರನ್ನು ಸಿದ್ದಮಾಡುವವನಾಗಿದ್ದನು. ಯೇಸುವು ಶರೀರದಲ್ಲಿ ಅವರ ಜೊತೆಯಲ್ಲಿ ಹೆಚ್ಚು ಕಾಲ ಇರಲು ಸಾಧ್ಯವಿರಲಿಲ್ಲ. ಆತನ ಮಾನವ ಅವತಾರವು ಈ ಜಾಗತಿಕ ಹಿನ್ನಲೆಯಲ್ಲಿ ಆತನನ್ನು ನಿರ್ಭಂದಕ್ಕೆ ಒಳಪಡಿಸುವುದು ಮಾತ್ರವಲ್ಲದೆ, ಆತನ ಅಹರೋಣವು ಮತ್ತು ಪರಲೋಕದಲ್ಲಿ ಆತನಿಗೆ ಸಲ್ಲಬೇಕಾದ ಘನತೆಯ ಫಲವಾಗಿ ಪರಿಶುದ್ದಾತ್ಮನು ಈ ಲೋಕಕ್ಕೆ ಬರುವುದು ಅವಶ್ಯಕವಾಗಿತ್ತು.

ಯೇಸುವಿನ ಪುನರುತ್ಥಾನದ ತನಕ ಶಿಷ್ಯರಿಗೆ ಈ ಸತ್ಯವೂ ಸಂಪೂರ್ಣವಾಗಿ ತಿಳಿಯಲಿಲ್ಲ. ಅವರು ಆತನನ್ನು ರಾಜಕೀಯ ವಿಮೋಚಕನಾಗಿ ಅವರನ್ನು ರೋಮನ್ನರನ್ನು ಅವರ ದೇಶದಿಂದ ಓಡಿಸಿ ಹಾಗೂ ಅವರ ದಬ್ಬಾಳಿಕೆಯಿಂದ ಕಾಪಾಡಿ ದಾವಿದನ ರಾಜ್ಯಭಾರವನ್ನು ಪುನಃ ಸ್ಥಾಪಿಸುವನು ಎಂದು ನಂಬಿದ್ದರು, ಮತ್ತು ಇಸ್ರಾಯೇಲ್ಯರ ಕಳೆದು ಹೋದ ಗತವೈಭವವನ್ನು ತಿರುಗಿ ಪಡೆಯುವಂತೆ ಮಾಡುವನು ಎಂದು ಭಾವಿಸಿದರು. ಇದಕ್ಕೆ ವಿರುದ್ದವಾಗಿ ಆಲೋಚನೆ ಮಾಡಲು ಅವರಿಗೆ ಸಾದ್ಯವಿರಲಿಲ್ಲ.

ಅಪೋಸ್ತಲರ ಕೃತ್ಯಗಳ 1 ನೇಯ ಅದ್ಯಾಯದಲ್ಲಿ ಯೇಸುವು ನೀಡುವ ಎಚ್ಚರಿಕೆಗಳ ಸಾರಾಂಶವು ಇದಾಗಿದೆ. ಪವಿತ್ರಾತ್ಮನ ವಾಗ್ದಾನವು ಈ ಹಿನ್ನಲೆಯಲ್ಲಿ ಕಾಣಿಸುತ್ತದೆ. ಈ ಅದ್ಯಾಯವು ಯೇಸುವು ಪರಲೋಕಕ್ಕೆ ಹಿಂತಿರುಗಿ ಬರುವುದು ಮತ್ತು ಮೊದಲ ಸಭೆಯು ಪಂಚಾಶತ್ತಮ ದಿನಕ್ಕಾಗಿ ತನ್ನನ್ನು ತಾನು ಸಿದ್ದ ಪಡಿಸಿಕೊಳ್ಳುವುದನ್ನು ವಿವರಿಸುತ್ತದೆ.

## ಇಸ್ರಾಯೇಲ್ಯರ ಪುನಃಸ್ಥಾಪನೆ

ಹಳೆಯ ಒಡಂಬಡಿಕೆಯಲ್ಲಿ ಎರಡು ವಿಧವಾದ ಮೆಸ್ಸಿಯನ ಪ್ರವಾದನೆಗಳನ್ನು ನೋಡುತ್ತೇವೆ, ಒಂದು ನಿತ್ಯ ರಾಜ್ಯಭಾರ ಮಾಡುವ ಅರಸನಾಗಿ ಬರುವ ಮೆಸ್ಸಿಯನು *(ಕೀರ್ತನೆ 69:3,4, 35-37; ಯೆಶಾಯ 9:6,7; ಯೆಹೆಜ್ಕೆಲನು 37:25; ದಾನಿಯೇಲ 2:44; 7:13,14)* ಮತ್ತು ತನ್ನ ಜನರಿಗಾಗಿ ತನ್ನ ಪ್ರಾಣವನ್ನು ತ್ಯಾಗಮಾಡುವ ಮೆಸ್ಸಿಯನು *(ಯೆಶಾಯ 52:13-53:12; ದಾನಿಯೇಲ 9:26).* ಇಂತಹ ಪ್ರವಾದನೆಗಳು ಒಂದಕ್ಕೊಂದು ವಿಬೇಧಿಸುವುದಿಲ್ಲ. ಬದಲಾಗಿ ಮೆಸ್ಸಿಯನ ಸೇವೆಯ ಎರಡು ಭಾಗಗಳನ್ನು ವಿವರಿಸುತ್ತವೆ: ಮೊದಲು ಆತನು ಶ್ರಮೆಯನ್ನು ಅನುಭವಿಸುತ್ತಾನೆ ನಂತರ ರಾಜಧಿರಾಜನಾಗಿ ಬರುತ್ತಾನೆ. *(ಲೂಕ 17:24,25; 24:25, 26).*

ಮೊದಲ ಶತಮಾನದ ಯೆಹೂದ್ಯರ ಮೆಸ್ಸಿಯನ ಕುರಿತಾಗಿ ನಿರೀಕ್ಷೆಯು ಒಂದು ಕಡೆಯ ಆಲೋಚನೆಯಾಗಿತ್ತು. ರಾಜಕೀಯವಾಗಿ ಜಯವನ್ನು ತರುವ ಮೆಸ್ಸಿಯನ ಚಿತ್ರಣವು ಬಲಿದಾನವಾಗುವ ಹಾಗೂ ಹಿಂಸೆಯನ್ನು ಅನುಭವಿಸುವ ಮೆಸ್ಸಿಯನ ಚಿತ್ರಣವನ್ನು ಸಂಪೂರ್ಣವಾಗಿ ಅಳಿಸಿಹಾಕಿತ್ತು.

ಆರಂಭದಲ್ಲಿ ಶಿಷ್ಯರು ಯೆಹೂದ್ಯರ ಮೆಸ್ಸಿಯನ ನಿರೀಕ್ಷೆಯನ್ನು ಹೊಂದಿದ್ದರು. ಯೇಸುವು ಮೆಸ್ಸಿಯನು ಎಂದು ಅವರು ನಂಬಿದ್ದರು, *(ಮತ್ತಾಯ 16:16,20)* ಮತ್ತು ಆತನ ಸಿಂಹಾಸನದ ಎಡಗಡೆ ಮತ್ತು ಬಲಗಡೆಯಲ್ಲಿ ಯಾರು ಕುಳಿತುಕೊಳ್ಳುವರು ಎಂದು ಪೈಪೋಟಿ ನಡೆಸುತ್ತಿದ್ದರು *(ಮಾರ್ಕ 10:35-37, ಲೂಕ 9:46).* ಯೇಸುವು ತನಗೆ ಉಂಟಾಗುವ ಶ್ರಮೆಯ ಕುರಿತಾಗಿ ತಿಳಿಸಿದ ಹೊರೆತಾಗಿಯೂ ಕೂಡ ಆತನು ಏನು ಹೇಳುತ್ತಿದ್ದಾನೆ ಎಂಬುದನ್ನು ಅವರು ಗ್ರಹಿಸಲಾರದೆ ಹೋದರು. ಆದ್ದರಿಂದ ಆತನು ಮರಣಹೊಂದಿದಾಗ ಅವರು ಗಲಿಬಿಲಿಗೊಂಡರು ಮತ್ತು ನಿರುತ್ಸಾಹ ಹೊಂದಿದರು. "ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು." *(ಲೂಕ 24:21)* ಎಂದು ಅವರು ಭಾವಿಸಿದರು.

**ಅ. ಪೋ. ಕೃ 1:6 ನ್ನು ಓದಿರಿ. ಅವರು ಇನ್ನೂ ಅರ್ಥ ಮಾಡಿಕೊಳ್ಳದ ವಿಷಯದ ಕುರಿತಾಗಿ ಅವರು ಕೇಳಿದ ಪ್ರಶ್ನೆಯು ಏನು ಸೂಚಿಸುತ್ತದೆ? ಅ.ಪೋ. ಕೃ. 1:7 ಯೇಸುವು ಅವರಿಗೆ ಹೇಗೆ ಉತ್ತರ ಕೊಟ್ಟನು?**

______________________________________________________________

______________________________________________________________

ಯೇಸುವಿನ ಮರಣವು ಶಿಷ್ಯರ ನಿರೀಕ್ಷೆಯನ್ನು ಸಂಪೂರ್ಣವಾಗಿ ನಾಶಮಾದಿದ್ದರೆ ಆತನ ಪುನರುತ್ಥಾನವು ಅದನ್ನು ಮತ್ತೆ ಜೀವಂತವಾಗಿಸಿತು, ಅವರ ರಾಜಕೀಯ ಆಶೆಗಳನ್ನು ಒಂದು ಹಂತಕ್ಕೆ ತೆಗೆದುಕೊಂಡು ಹೋಯಿತು. ಯಾಕೆಂದರೆ ಪುನರುತ್ಥಾನವು ಮೆಸ್ಸಿಯನ ರಾಜ್ಯವನ್ನು ಮತ್ತೆ ಸ್ಥಾಪಿಸುವ ಬಲವಾದ ಸೂಚನೆಯಂತೆ ಅವರಿಗೆ ಕಾಣಿಸಿತು.

ಅವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಯೇಸುವು ನೇರವಾಗಿ ಉತ್ತರಿಸಲಿಲ್ಲ, ಅವರ ಪ್ರಶ್ನೆಯ ಉದ್ದೇಶವನ್ನು ಆತನು ಗ್ರಹಿಸಿದನು ಆದರೆ ಆತನು ಅದನ್ನು ಸಂಪೂರ್ಣವಾಗಿ ಅಂಗಿಕರಿಸಲಿಲ್ಲ. ಆ ಸಮಸ್ಯೆಯನ್ನು ಅಲ್ಲಿಗೆ ಬಿಟ್ಟನು.

ಆದರೆ ದೇವರ ಕಾರ್ಯಗಳು ದೇವರಿಗೆ ಮಾತ್ರ ಸೇರಿದ್ದವು ಮತ್ತು ಅವುಗಳನ್ನು ಗ್ರಹಿಸಲು ಮಾನವರ ಜ್ಞಾನವು ಸಾಕಾಗುವುದಿಲ್ಲ ಎಂದು ಅವರಿಗೆ ಜ್ಞಾಪಕಪಡಿಸಿದನು.

**ಲೂಕ 24:25 ರ ಪ್ರಕಾರ ಶಿಷ್ಯರ ನಿಜವಾದ ಸಮಸ್ಯೆ ಏನಾಗಿತ್ತು? ನಾವು ಏನು ನಂಬುತ್ತೇವೋ ಅದನ್ನು ನಿರೀಕ್ಷಿಸುವುದು ಎಷ್ಟು ಸುಲಭ, ಸತ್ಯವೇದವು ಅದಕ್ಕೆ ವಿರುದ್ಧವಾಗಿ ಬೋಧಿಸಿದರೂ ಕೂಡ ನಾವು ಅದನ್ನು ಅದರ ಬಲೆಯಲ್ಲಿ ಯಾವ ರೀತಿಯಲ್ಲಿ ಬೀಳುತ್ತೇವೆ?**

**ಸೋಮವಾರ** ಜುಲೈ 2

## ಶಿಷ್ಯರ ಸೇವೆ

**ಅ. ಪೋ. ಕೃ 1:8 ನ್ನು ಓದಿರಿ. ಪ್ರವಾದನೆಯ ವಿಷಯವಾಗಿ ಕೂತುಹಲದಿಂದ ಎದುರುನೋಡುವ ಬದಲು ಶಿಷ್ಯರು ಮಾಡಬೇಕಾಗಿದ್ದ ಕೆಲಸವು ಯಾವುದಾಗಿತ್ತು?**

____________________________________________________________

____________________________________________________________

ಶಿಷ್ಯರ ಸೇವೆಯ ಕುರಿತಾಗಿ ಹೇಳುವ ಈ ಕೆಳಗಿನ ವಾಕ್ಯದಲ್ಲಿ ನಾಲ್ಕು ಮುಖ್ಯವಾದ ವಿಷಯಗಳು ಅಡಗಿವೆ.

1. ಪವಿತ್ರಾತ್ಮನ ವರ. ದೇವರ ಆತ್ಮನು ತನ್ನ ಜನರ ನಡುವೆ ಯಾವಾಗಲೂ ಕ್ರಿಯಾಶೀಲನಾಗಿದ್ದನು. ಪ್ರವಾದಿಗಳ ಪ್ರಕಾರ ಭವಿಷ್ಯದಲ್ಲಿ ದೇವರ ಜನರ ಮೇಲೆ ಹೆಚ್ಚಿನ ಪ್ರಭಾವವನ್ನು ಬಿರುತ್ತಾನೆ (ಯೆಶಾಯ 44:3; ಯೋವೇಲ 2:28,29). ಯೇಸುವು ಸ್ವತಃ ಪವಿತ್ರಾತ್ಮನಿಂದ ಅಭಿಷೇಕಹೊಂದಿದನು, ಯೇಸುವಿನ ಸೇವೆಯ ಸಮಯದಲ್ಲಿ ಪವಿತ್ರಾತ್ಮನು ಬಹಳ ಕ್ರಿಯಾರೂಪದಲ್ಲಿದ್ದನು. (ಲೂಕ 4:18-21) ಆದರೆ ಕ್ರಿಸ್ತನು ಪರಲೋಕಕ್ಕೆ ಹೋಗುವ ತನಕ ಆತನು ಅಧಿಕಾರಯುತವಾಗಿ ಕೆಲಸದಲ್ಲಿ ಭಾಗವಹಿಸಲಿಲ್ಲ. (ಯೋಹಾನ 7:39, ಅ. ಪೋ. ಕೃ 2:33).
2. ಸಾಕ್ಷಿಯ ಪಾತ್ರ. ಸಾಕ್ಷಿ ಎಂಬುದು ಯಾವುದೇ ಘಟನೆಯ ಮೊದಲ ವರದಿ. ಶಿಷ್ಯರು ಇಂತಹ ಸಾಕ್ಷಿಯನ್ನು ನೀಡಲು ಎಲ್ಲ ರೀತಿಯಲ್ಲೂ ಕೂಡ ಅರ್ಹತೆಯನ್ನು ಹೊಂದಿದ್ದರು. (ಅ.ಪೋ.ಕೃ. 1:21,22; 4:20) 1 ಯೋಹಾನ 1:1-3 ರ ಜೊತೆಗೆ ಹೋಲಿಸಿರಿ) ಮತ್ತು ಯೇಸುವಿನ ಜೊತೆಗಿನ ತಮ್ಮ ಅನುಭವವನ್ನು ಲೋಕದ ಜೊತೆಗೆ ಹಂಚಿಕೊಳ್ಳಲು ಅವರು ಸಂಪೂರ್ಣವಾಗಿ ಸಿದ್ಧರಾಗಿದ್ದರು.
3. ಸೇವೆಯ ಯೋಜನೆ. ಶಿಷ್ಯರು ಮೊದಲು ಯೆರುಶಲೇಮಿನಲ್ಲಿ ನಂತರ ಯೂದಾಯ ಹಾಗೂ ಸಮಾರ್ಯ ದೇಶಗಳಲ್ಲಿ ಸಾಕ್ಷಿಯನ್ನು ಸಾರಬೇಕಾಗಿತ್ತು, ಮತ್ತು ಕೊನೆಯದಾಗಿ ಲೋಕದ ಕಟ್ಟಕಡೆಯವರೆಗೂ ಸುವಾರ್ತೆಯನ್ನು ಸಾರಬೇಕಾಗಿತ್ತು. ಇದೊಂದು ಅಭಿವೃದ್ಧಿಯ ಯೋಜನೆಯಾಗಿತ್ತು. ಯೇರುಷಲೆಮು ಯೆಹೂದ್ಯ ಧಾರ್ಮಿಕ ಜೀವನದ ಕೇಂದ್ರ ಬಿಂದುವಾಗಿತ್ತು. ಈ ಸ್ಥಳದಲ್ಲಿ ಯೇಸುವು ಅವಮಾನಕ್ಕೆ ಗುರಿಯಾಗಿ ಮತ್ತು ಮರಣವನ್ನು ಅನುಭವಿಸಿದನು. ಯೂದ ಮತ್ತು ಸಮಾರ್ಯ ಪ್ರಾಂತ್ಯಗಳಲ್ಲಿ ಯೇಸುವು

ಸೇವೆಯನ್ನು ಮಾಡಿದ್ದನು. ಆದರೆ ಈ ಪ್ರದೇಶಗಳಿಗೆ ಮಾತ್ರ ಸುವಾರ್ತೆಯನ್ನು ನಿರ್ಭಂದಿಸಲು ಸಾಧ್ಯವಿರಲಿಲ್ಲ. ಅವರ ಸುವಾರ್ತೆಯ ದೃಷ್ಟಿಕೋನವು ಜಾಗತಿಕವಾಗಿತ್ತು.

4. ಸೇವೆಗೆ ಸಿದ್ದರಾಗುವುದು. ಹಳೆಯ ಒಡಂಬಡಿಕೆಯ ಸಮಯದಲ್ಲಿ ದೇವರು ಇತರೆ ದೇಶಗಳನ್ನು ತನ್ನ ಕಡೆಗೆ ಆಕರ್ಷಸುತ್ತಿದ್ದನು. (ಯೆಶಾಯ 2:1-5), ಇಸ್ರಾಯೇಲ್ಯರು ದೇವರನ್ನು ಇತರೆ ಭಾಗಗಳಿಗೆ ತೆಗೆದುಕೊಂಡು ಹೋಗುವ ಅವಶ್ಯಕತೆ ಇರಲಿಲ್ಲ. ಇದಕ್ಕೆ ಕೆಲವು ವಿನಾಯಿತಿಗಳನ್ನು ನೀಡಬಹುದು (ಉದಾಹರಣೆಗೆ, ಯೋನ) ಈಗ ಕಾರ್ಯತಂತ್ರ ವ್ಯತ್ಯಾಸವಾಗಿತ್ತು. ಯೇರುಷಲೆಮು ಇನ್ನೂ ಕೂಡ ಕೇಂದ್ರಬಿಂದುವಾಗಿತ್ತು. ಆದರೆ ಅಲ್ಲೇ ಇದ್ದು ಬೇರು ಬಿದುವುದಕ್ಕಿಂತ ಶಿಷ್ಯರು ಈಗ ಲೋಕದ ಕಟ್ಟ ಕಡೆಯವರೆಗೂ ಹೋಗಬೇಕಾಗಿತ್ತು.

**ಲೂಕ 24:44-48 ನ್ನು ಓದಿರಿ. ಶಿಷ್ಯರು ಬೋಧಿಸಬೇಕಾದ ಬೋಧನೆಯ ಮುಖ್ಯವಾದ ತಿರುಳು ಏನಾಗಿತ್ತು.?**

____________________________________________________________

ಪುನರುತ್ಥಾನದ ನಂತರ ಯೇಸುವು ಶಿಷ್ಯರ ಜೊತೆಯಲ್ಲಿ ಕಳೆದ ನಲವತ್ತು ದಿನಗಳ ಸಮಯದಲ್ಲಿ *(ಅ.ಪೋ. ಕೃ 1:3)* ಯೇಸುವು ಅವರಿಗೆ ದೇವರ ರಾಜ್ಯದ ಕುರಿತಾಗಿ ವಿವರಿಸಿದನು ಅವರು ಅದನ್ನು ಸಂಪೂರ್ಣವಾಗಿ ಗ್ರಹಿಸಿದೆ ಹೋದರೂ ಕೂಡ ಯಾಕೆಂದರೆ ಅವರು ಅ. ಪೋ. ಕೃ 1:6 ರಲ್ಲಿ ಕೇಳಿದ ಪ್ರಶ್ನೆಯು ಇದನ್ನು ಸ್ಪಷ್ಟಪಡಿಸುತ್ತದೆ. ಅವರಿಗೆ ಗೊತ್ತಿದ್ದ ಪ್ರವಾದನೆಗಳನ್ನು ಹೊಸ ದೃಷ್ಟಿಕೋನದಲ್ಲಿ ಅವರು ಈಗ ನೋಡುತ್ತಿದ್ದರು. ಈ ಹೊಸ ಬೆಳಕು ಅವರಿಗೆ ಶಿಲುಬೆಯ ಮತ್ತು ಖಾಲಿ ಸಮಾಧಿಯ ಮೂಲಕ ಸಿಕ್ಕಿತ್ತು *(ಅ.ಪೋ.ಕೃ 3:17-19)*.

ಮಂಗಳವಾರ ಜುಲೈ 3

## ಆತನು ಮತ್ತೆ ಬರುತ್ತಾನೆ

**ಅ.ಪೋ ಕೃ 1:9-11 ನ್ನು ಓದಿರಿ. ಲೂಕನು ಯೇಸುವಿನ ಆರೋಹಣವನ್ನು ಹೇಗೆ ವಿವರಿಸುತ್ತಾನೆ? ಅವರೊಂದಿಗೆ ಮಾತನಾಡುವ ಆ ಇಬ್ಬರೂ ದೂತರ ಸಂದೇಶದ ಪ್ರಾಮುಖ್ಯತೆಯೇನು? (*ಧರ್ಮೋಪದೇಶಕಾಂಡ 19:15*).**

____________________________________________________________

____________________________________________________________

ಲೂಕನು ತಿಳಿಸುವ ಆರೋಹಣವು ಒಂದು ನಂಬಿಕೆಯಾಗಿದೆ. ಯೇಸುವು ತನ್ನ ಶಿಷ್ಯರೊಂದಿಗೆ ಎಣ್ಣೆ ಮರಗಳ ಗುಡ್ಡದ ಮೇಲೆ ಇದ್ದು ಅವರನ್ನು ಇನ್ನೂ ಆಶೀರ್ವಾದ ಮಾಡುತ್ತಿದ್ದನು *(ಲೂಕ 24:51)*. ಆತನು ಪರಲೋಕಕ್ಕೆ ಒಯ್ಯಲ್ಪಟ್ಟನು.

ಇಲ್ಲಿ ಉಪಯೋಗಿಸಿರುವ ಭಾಷೆಯು ಅದ್ಭುತವಾದದ್ದು. ಮಾನವರ ಕಣ್ಣುಗಳಿಂದ ಕಂಡು ಬರುವ ದೃಶ್ಯವಿದು, ಅದು ನೈಜವಾದ ಘಟನೆ, ಯೇಸುವು ಭೂಲೋಕವನ್ನು ಬಿಡುತ್ತಿದ್ದಾನೆ, ಮತ್ತು ಈ ರೀತಿಯಲ್ಲಿ ಅಲ್ಲದೆ ಬೇರೆ ಯಾವ ವಿಧಾನದಲ್ಲೂ ಈ ಲೋಕವನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ.

ಯೇಸುವಿನ ಆರೋಹಣವು ಇಡೀ ಸತ್ಯವೇದದಲ್ಲಿ ಕಾಣಬರುವ ದೇವರ ಅದ್ಭುತವಾದ ಕಾರ್ಯಗಳಲ್ಲಿ ಒಂದಾಗಿದೆ. ಇದನ್ನು ಲೂಕನ ವಿವರಣೆಯಿಂದ ಇನ್ನೂ ವಿಶೇಷತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಉಪಯೋಗಿಸಿರುವ ಕ್ರಿಯಾರೂಪಕವನ್ನು ಹೊಸ ಒಡಂಬಡಿಕೆಯಲ್ಲಿ *(ಅ.ಪೋ.ಕೃ 1:9)* ಮೊದಲ ಬಾರಿಗೆ ಉಪಯೋಗಿಸಲಾಗಿದ್ದರೂ ಕೂಡ ಹಳೆಯ ಒಡಂಬಡಿಕೆಯ ಅನೇಕ ಕಡೆಯಲ್ಲಿ ಉಪಯೋಗಿಸಲಾಗಿದೆ. ಇವೆಲ್ಲವೂ ಕೂಡ ದೇವರ ಕಾರ್ಯಗಳನ್ನು ತಿಳಿಸುತ್ತದೆ. ಇದರ ಮೂಲಕ ನಾವು ತಿಳಿದುಕೊಳ್ಳುವುದೇನೆಂದರೆ ದೇವರು ತಾನೇ ಯೇಸುವನ್ನು ಮರಣದಿಂದ ಬಿಡಿಸಿ ಪರಲೋಕಕ್ಕೆ ಕರೆದುಕೊಂಡು ಹೋದನು. *(ಅ.ಪೋ.ಕೃ 2:24,32; ರೋಮ 6:4; 10:9).*

ಯೇಸುವು ಮೇಘಗಳ ಮಧ್ಯದಲ್ಲಿ ಮರೆಯಾಗುತ್ತಿದ್ದಾನೆ, ಪರಲೋಕದಿಂದ ಇಳಿದು ಬರುವ ಆ ಇಬ್ಬರೂ ದೂತರ ಕುರಿತಾಗಿ ಲೂಕನು ಮಾತ್ರ ಬರೆಯುತ್ತಾನೆ. ಈ ವಿವರಣೆಯು ದೇವ ದೂತರು ತಮ್ಮ ಬಿಳಿ ವಸ್ತ್ರಗಳನ್ನು ಧರಿಸಿದ್ದರು ಎಂದು ತಿಳಿಸುತ್ತದೆ. *(ಅ.ಪೋ.ಕೃ 10:30, ಯೋಹಾನ 20:20*). ಅವರು ಶಿಷ್ಯರ ಬಳಿಗೆ ಬಂದು ಯೇಸುವು ಯಾವ ರೀತಿಯಾಗಿ ಪರಲೋಕಕ್ಕೆ ಏರಿ ಹೋದನೋ ಅದೇ ರೀತಿಯಲ್ಲಿ ತಿರುಗಿ ಬರುತ್ತಾನೆ ಎಂದು ಅಭಯವನ್ನು ನೀಡಿದರು, ಮತ್ತು ಲೂಕನು ಮಾತ್ರ ಯೇಸುವು "ಎಲ್ಲರ ಕಣ್ಣುಗಳ ಮುಂದೆ ಪರಲೋಕಕ್ಕೆ ಏರಿ ಹೋದನು" ಎಂದು ತಿಳಿಸುತ್ತಾನೆ *(ಲೂಕ 1:9).*

ಆದ್ದರಿಂದ ಎಲ್ಲರೂ ನೋಡುವ ಹಾಗೆ ಯೇಸುವು ಪರಲೋಕಕ್ಕೆ ಏರಿ ಹೋದದ್ದು ಅದೇ ರೀತಿಯಲ್ಲಿ ಆತನು ತಿರುಗಿ ಬರುವನು ಎಂದು ಭರವಸೆಯನ್ನು ನೀಡುತ್ತದೆ. ಅದೂ ಕೂಡ ಮೇಘಗಳ ನಡುವೆ ನಡೆಯುವ ಘಟನೆಯಾಗಿದೆ. ಆದರೆ ಅದು "ಶಕ್ತಿ ಮತ್ತು ಮಹಾ ಮಹಿಮೆಯಿಂದ" ನಡೆಯುತ್ತದೆ (*ಲೂಕ 21:27*). ಅದು ವ್ಯಯಕ್ತಿಕ ಘಟನೆಯಲ್ಲ. "ಪ್ರತಿಯೊಂದು ಕಣ್ಣು ಆತನನ್ನು ನೋಡುತ್ತದೆ" *(ಪ್ರಕಟನೆ 1:7)* ಮತ್ತು ನಾವು ಒಂಟಿಯಾಗಿರುವುದಿಲ್ಲ *(ಲೂಕ 9:26, 2 ಥೆಸಲೋನಿಕ 1:7).* ಎರಡನೇಯ ಬರೋಣದ ಮಹಿಮೆಯು ಆತನ ಆರೋಹಣದ ಮಹಿಮೆಗಿಂತ ವಿಶೇಷವಾಗಿರುತ್ತದೆ.

**ಎರಡನೇಯ ಬರೋಣದ ವಾಸ್ತವತೆ ಹಾಗೂ ಭರವಸೆಯನ್ನು ಯಾವಾಗಲೂ ನಮ್ಮ ಮುಂದೆ ಇರಿಸಿಕೊಳ್ಳಲು ನಾವು ಏನು ಮಾಡಬೇಕು? ಈ ವಿಶೇಷವಾದ ಸತ್ಯವು ನಮ್ಮ ಜೀವನದ ಇತರ ವಿಷಯಗಳಾದ ಹಣಕಾಸು, ಆದ್ಯತೆಗಳು, ಮತ್ತು ನೈತಿಕ ಆಯ್ಕೆಗಳನ್ನು ಹೇಗೆ ಪ್ರಭಾವಿತಗೊಳಿಸಬೇಕು.**

ಬುಧವಾರ ಜುಲೈ 4

## ಪಂಚಾಶತ್ತಮ ದಿನಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದು

ಅ.ಪೋ.ಕೃ 1:7,8 ರಲ್ಲಿ ಯೇಸುವು ಕೊಡುವ ಉತ್ತರವನ್ನು ಗಮನಿಸಿದಾಗ ಸಮಯದ ಕುರಿತಾಗಿ ಆತನು ಯಾವುದೇ ವಾಗ್ದಾನವನ್ನು ಮಾಡುವುದಿಲ್ಲ. ಆದರೂ ಕೂಡ ಪವಿತ್ರಾತ್ಮನು ಬಂದ ನಂತರ ಶಿಷ್ಯರು ತಮ್ಮ ಸೇವೆಯನ್ನು ಸಂಪೂರ್ಣಗೊಳಿಸುವರು ಅನಂತರ ಯೇಸುವು ಹಿಂತಿರುಗಿ ಬರುತ್ತಾನೆ.*(ಮತ್ತಾಯ 24:14).* ದೇವದೂತರ ಮಾತುಗಳಲ್ಲಿ ಯೇಸುವಿನ ಬರೋಣ ಯಾವಾಗ ಸಂಭವಿಸುತ್ತದೆ ಎಂದು ತಿಳಿಸುತ್ತದೆ, ಆದರೆ ಅದು

ಬಹಳ ದೂರದಲ್ಲಿ ಇಲ್ಲ ಎಂಬುದನ್ನು ತಿಳಿಸುತ್ತದೆ. ಇದಕ್ಕಾಗಿಯೇ ಶಿಷ್ಯರು "ಬಹಳ ಸಂತೋಷದಿಂದ ಯೆರುಷಲೆಮಿಗೆ ಹಿಂತಿರುಗಿದರು" *(ಲೂಕ 24:52).* ಯೇಸುವಿನ ಎರಡನೇಯ ಬರೋಣದ ಅನಿಶ್ಚಿತವಾದ ಸಮಯವು ಅವರಿಗೆ ಸೇವೆಯನ್ನು ಮಾಡಲು ಹೆಚ್ಚಿನ ಉತ್ಸಾಹವನ್ನು ನೀಡುತ್ತದೆ, ಇದರ ಅರ್ಥವೆಂದರೆ ಅಂತ್ಯವು ಬಹಳ ಹತ್ತಿರದಲ್ಲಿದೆ. ಅಪೋಸ್ತಲರ ಕೃತ್ಯಗಳ ಇತರೆ ಕಾರ್ಯಗಳು ಈ ಸತ್ಯವನ್ನು ಧೃಢಪಡಿಸುತ್ತವೆ.

**ಅ.ಪೋ.ಕೃ 1:12-14 ನ್ನೂ ಓದಿರಿ. ಇನ್ನೂ ಯಾರಾರು ಆ ಮೇಲಂತಸ್ತಿನ ಕೋಣೆಯಲ್ಲಿ ಇದ್ದರು ಅವರು ಯಾವ ರೀತಿಯಲ್ಲಿ ಆತ್ಮನ ವರಕ್ಕಾಗಿ ತಮ್ಮನ್ನು ತಾವು ಸಿದ್ಧತೆ ಮಾಡಿಕೊಂಡರು?**

________________________________________________________________________

________________________________________________________________________

ಎಣ್ಣೆ ಮರಗಳ ಗುಡ್ಡದಿಂದ ಬಂದ ನಂತರ ಶಿಷ್ಯರು ಮೇಲಂತಸ್ತಿನ ಕೋಣೆಯಲ್ಲಿ ಸೇರಿದರು (ಇದನ್ನು ಲ್ಯಾಟಿನ್ ಭಾಷೆಯಲ್ಲಿ *ಸೇನಕ್ಯಲುಂ* ಎಂದು ಕರೆಯುತ್ತಾರೆ) ಇದು ಯೆರುಶಲೇಮಿನಲ್ಲಿರುವ ಎರಡಂತಸ್ತಿನ ಕಟ್ಟಡವಾಗಿತ್ತು. ಅಲ್ಲಿ ಕೆಲವು ಸ್ತ್ರೀಯರು *(ಲೂಕ 8:1-3, 23:49, 24:1-12)*, ಯೇಸುವಿನ ತಾಯಿ, ಮತ್ತು ಸಹೋದರರು ಕೂಡ ಶಿಷ್ಯರ ಸಂಗಡ ಇದ್ದರು.

ಯೇಸುವಿನ ಸಹೋದರರು *(ಮಾರ್ಕ 6:3)* ಅಂದರೆ ಯೋಸೆಫ ಮತ್ತು ಮರಿಯಳ ಕಿರಿಯ ಮಕ್ಕಳಾಗಿರಬಹುದು *(ಮತ್ತಾಯ 1:25, ಲೂಕ 2:7)* ಅಥವಾ ಯೋಸೆಫನ ಮೊದಲ ಮದುವೆಯ ಮಕ್ಕಳಾಗಿರಬಹುದು, ಶಿಷ್ಯರ ನಡುವೆ ಅವರು ಇರುವುದು ಬಹಳ ಆಶ್ಚರ್ಯವನ್ನು ತಂದಿತ್ತು. ಯಾಕೆಂದರೆ ಯೇಸುವಿನ ಕುರಿತಾಗಿ ಅವರು ಅಷ್ಟು ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. *(ಮಾರ್ಕ 3:21, ಯೋಹಾನ 7:5).* ಆದರೂ ಕೂಡ ಯೇಸುವಿನ ಪುನರುತ್ಥಾನ ಮತ್ತು ಯಾಕೋಬನಿಗೆ ಆತನ ವಿಶೇಷವಾದ ಪ್ರತ್ಯಕ್ಷತೆ *(1 ಕೊರಿಂಥ 15:7)* ಈ ಎಲ್ಲಾ ವ್ಯತ್ಯಾಸವನ್ನು ತಂದಿರಬಹುದು. ಮುಂದಿನ ದಿನಗಳಲ್ಲಿ ಸಭೆಯ ನಾಯಕತ್ವದಲ್ಲಿ ಯಾಕೋಬನು ಪೇತ್ರನ ಸ್ಥಾನವನ್ನು ವಹಿಸಿಕೊಂಡನು. *(ಅ. ಪೋ. ಕೃ 12:17; 15:13; 21:18; ಗಲಾತಿ 2:9,12).*

ಅವರು ನಿರಂತರವಾದ ಪ್ರಾರ್ಥನೆ *(ಅ. ಪೋ.ಕೃ 1:14)* ಮತ್ತು ದೇವಾಲಯದಲ್ಲಿ ನಿತ್ಯವೂ ಸೇರುತ್ತಾ ದೇವರನ್ನು ಮಹಿಮೆ ಪಡಿಸುತ್ತಿದ್ದರು *(ಲೂಕ 24:53)*, ಅವರೆಲ್ಲರೂ ಕೂಡ ಪಶ್ಚಾತ್ತಾಪ, ಮಾನಸಾಂತರ ಮತ್ತು ಪಾಪವನ್ನು ದೂರ ಮಾಡುವ ಮನಸ್ಸನ್ನು ಹೊಂದಿದ್ದರು. ಮುಂದೆ ನಡೆಯುವ ಘಟನೆಗಳಿಗೆ ಅವರ ಮನಸ್ಸು ಸಿದ್ಧತೆಯನ್ನು ನಡೆಸುತ್ತಿತ್ತು ಅವರ ಪ್ರಾರ್ಥನೆಯ ಫಲವಾಗಿ ಆತ್ಮನು ಅವರ ಮಧ್ಯದಲ್ಲಿ ಇಳಿದು ಬರುವುದಕ್ಕಾಗಿ ಅವರು ಕಾಯುತ್ತಿದ್ದರು.

**ನಮ್ಮ ದೈನಂದಿನ ಜೀವನದಲ್ಲಿ ಪವಿತ್ರಾತ್ಮನು ಕಾರ್ಯಗಳನ್ನು ಮಾಡುವ ಹಾಗೆ ನಾವು ಯಾವ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ.?**

ಗುರುವಾರ ಜುಲೈ 5

## ಹನ್ನೆರಡನೇಯ ಅಪೋಸ್ತಲನು

ಆದಿ ಕ್ರೈಸ್ತ ಸಮುದಾಯದ 120 ಜನರ ವಿಶ್ವಾಸಿಗಳ ನಡುವೆ *(ಅ.ಪೋ.ಕೃ 1:15)*, ಹನ್ನೆರಡನೇಯ ಶಿಷ್ಯನನ್ನು ಆಯ್ಕೆ ಮಾಡುವುದು ಅವರ ಮೊದಲ ಆಡಳಿತ್ಮಾಕವಾದ ಕಾರ್ಯವಾಗಿತ್ತು.

**ಅ.ಪೋ.ಕೃ 1:21,22 ನ್ನು ಓದಿರಿ. ಯೂದನ ನಂತರ ಅವನ ಸ್ಥಾನದಲ್ಲಿ ಯಾರನ್ನು ಆಯ್ಕೆ ಮಾಡಬೇಕು ಎಂಬ ವಿಚಾರದಲ್ಲಿ ಇದ್ದ ಅರ್ಹತೆಗಳು ಯಾವುವು? ಇವು ಯಾಕೆ ಅಷ್ಟು ಮುಖ್ಯವಾದವುಗಳಾಗಿದ್ದವು?**

__________________________________________________

__________________________________________________

ಆ ಸಮಯದ ಮುಖ್ಯವಾದ ವಿಷಯದ ಯೇಸುವಿನ ಪುನರುತ್ಥಾನದ ಸಾಕ್ಷಿಯನ್ನು ತಿಳಿಸುವುದಾಗಿತ್ತು *(ಅ.ಪೋ.ಕೃ 4:33 ರ ಜೊತೆಗೆ ಹೋಲಿಸಿರಿ)* ಇದು ಬಹಳ ಮುಖ್ಯವಾದ ಸಮಯವಾಗಿತ್ತು ಯಾಕೆಂದರೆ ಪುನರುತ್ಥಾನವು ಇಡೀ ಕ್ರೈಸ್ತ ಸಮುದಾಯದ ಅತೀ ಪ್ರಾಮುಖ್ಯತೆಯ ಸತ್ಯವಾಗಿ ಮಾರ್ಪಾಟ್ಟಿತ್ತು.

ಯೇಸುವಿನ ಜೊತೆಯಲ್ಲಿ ಸೇವೆಯನ್ನು ಮಾಡಿದವರ ಮಧ್ಯದಲ್ಲಿ ಆಯ್ಕೆಯು ನಡೆಯಿತು. ಪೇತ್ರನು ನಂತರ ಹೇಳುವ ಪ್ರಕಾರ ಆತನು ಯೇಸುವಿನ ಸೇವೆಯಲ್ಲಿ ನೇರವಾಗಿ ಭಾಗವಹಿಸದೆ ಇದ್ದರೂ ಕೂಡ, ಯೇಸುವಿನ ಪುನರುತ್ಥಾನದ ನಂತರ ಯೇಸುವಿನ ಜೊತೆಯಲ್ಲಿ ಅವನು ಮಾಡಿದ ಸಂಭಾಷಣೆಯು ಅವನನ್ನು ಒಳ್ಳೆಯ ಸಾಕ್ಷಿಯಾಗುವಂತೆ ಮಾಡಿತು. *(1 ಕೊರಿಂಥ 9:1)*. ಯೇಸುವಿನ ಜೊತೆಯಲ್ಲಿ ಸೇವೆಯನ್ನು ಮಾಡದಿದ್ದರೂ ಕೂಡ ಪೌಲನು ತನ್ನನ್ನು ತಾನು ಅಪೋಸ್ತಲನೆಂದು ಪರಿಗಣಿಸಿದನು *(1 ಕೊರಿಂಥ 9:2, ಗಲಾತಿ 2:6-9)*. ಹನ್ನೆರಡು ಮತ್ತು ಪೌಲನು ಶಿಷ್ಯರು ಮಾತ್ರ ಅಧಿಕಾರಿಯುತವಾಗಿ ಅಪೋಸ್ತಲರು ಎಂದು ಕರೆಯಲ್ಪಟ್ಟರು *(ಅ.ಪೋ.ಕೃ 1:25, 26)*; ಆದರೂ ಕೂಡ ಅಪೋಸ್ತಲನು ಎಂಬ ಈ ಪದವನ್ನು ಸಂದೇಶಕನು ಅಥವಾ ಸುವಾರ್ತೆ ಸೇವಕನು ಎಂದು ಅರ್ಥೈಸಿಕೊಳ್ಳಬಹುದು.

**ಅ.ಪೋ.ಕೃ 1:23-26 ನ್ನು ಓದಿರಿ. ಮತ್ತಾಯನನ್ನು ಹೇಗೆ ಆಯ್ಕೆ ಮಾಡಲಾಯಿತು?**

__________________________________________________

__________________________________________________

ಮತ್ತಾಯನನ್ನು ಆಯ್ಕೆ ಮಾಡಿದ ವಿಧಾನವು ಬಹಳ ಅಚ್ಚರಿಯನ್ನು ಉಂಟುಮಾಡುತ್ತದೆ, ಆದರೆ ಚೀಟುಗಳನ್ನು ಹಾಕುವುದು ತುಂಬಾ ಹಳೆಯ ವಿಧಾನವಾಗಿತ್ತು *(ಉದಾಹರಣೆಗೆ ಯಾಜಕಕಾಂಡ 16:5-10, ಅರಣ್ಯಕಾಂಡ 26:55*) ಇದಕ್ಕೆ ಜೊತೆಯಾಗಿ ಇಬ್ಬರ ನಡುವೆಯ ಆಯ್ಕೆ ಮತ್ತು ಅದಕ್ಕೆ ಬೇಕಾದ ಅರ್ಹತೆಗಳು ನಮಗೆ ಸ್ಪಷ್ಟವಾಗಿ ತಿಳಿಯಪಡಿಸಿಲ್ಲ. ವಿಶ್ವಾಸಿಗಳು ಈ ಆಯ್ಕೆಯು ದೇವರ ಚಿತ್ತವನ್ನು ತಿಳಿಸುವ ರೀತಿಯಲ್ಲಿ ಆತನಿಗೆ ಪ್ರಾರ್ಥನೆ ಮಾಡಿದರು. *(ಙ್ಞಾನೋಕ್ತಿ 16:33 ರ ಹೋಲಿಸಿರಿ)*. ಆಯ್ಕೆಯ ತೀರ್ಮಾನವನ್ನು ಯಾರೂ ಕೂಡ

ಪ್ರಶ್ನಿಸಲಿಲ್ಲ, ಪಂಚಾಶತ್ತಮ ದಿನದ ನಂತರ ಚೀಟು ಹಾಕುವ ಪದ್ಧತಿಯ ಅವಶ್ಯಕತೆಯಿರಲಿಲ್ಲ ಯಾಕೆಂದರೆ ಪವಿತ್ರಾತ್ಮನು ನೇರವಾಗಿ ಆಯ್ಕೆಯನ್ನು ಮಾಡುತ್ತಿದ್ದನು. *(ಅ. ಪೋ. ಕೃ 5:3, 11:15-18, 13:2, 16:6-9).*

**ನಿಮ್ಮ ಬಳಿಗೆ ಯಾರಾದರೂ ಬಂದು ನನ್ನ ಜೀವನದಲ್ಲಿ ದೇವರ ಚಿತ್ತವನ್ನು ಹೇಗೆ ತಿಳಿಯುವುದು ಎಂದು ಪ್ರಶ್ನಿಸಿದರೆ ನಿಮ್ಮ ಉತ್ತರ ಏನಾಗಿರುತ್ತದೆ? ಮತ್ತು ಯಾಕೆ ಆ ಉತ್ತರವನ್ನು ನೀಡುವಿರಿ?**

**ಶುಕ್ರವಾರ** ಜುಲೈ 6

**ಹೆಚ್ಚಿನ ಚಿಂತನೆ:** ಪಂಚಾಶತ್ತಮ ದಿನದಿಂದ ಹಿಡಿದು ಕ್ರಿಸ್ತನ ಬರೋಣದ ತನಕದ ಸಮಯ (ಅದು ಹೆಚ್ಚಾಗಿರಲು ಅಥವಾ ಕಡಿಮೆಯಾಗಿರಲಿ) ಆತ್ಮನ ಶಕ್ತಿಯಿಂದ ಸಭೆಯು ಸುವಾರ್ತೆಯನ್ನು ಲೋಕದ ಕಟ್ಟಕಡೆಯವರೆಗೂ ತೆಗೆದುಕೊಂಡು ಹೋಗುವುದರಲ್ಲಿ ಕಳೆಯಬೇಕಾಗಿತ್ತು. ಯೇಸುವಿನ ಹಿಂಬಾಲಕರು ಆತನು ತನ್ನ ಮೊದಲ ಬರೋಣದಲ್ಲಿ ಏನನ್ನು ಸಾಧಿಸಿದನು ಅದರ ಫಲವಾಗಿ ಅವರು ಮಾನಸಾಂತರ ಹೊಂದಿಕೊಂಡು ನಂಬಿಕೆಯನ್ನು ಹೊಂದಿಕೊಂಡು ಆತನ ಎರಡನೇಯ ಬರೋಣಕ್ಕಾಗಿ ಸಿದ್ಧರಾಗುವಂತೆ ಬೋಧನೆ ಮಾಡಬೇಕಾಯಿತು. ಅವರು ಇಡೀ ಲೋಕಕ್ಕೆ ಸಾಕ್ಷಿಗಳಾಗಿ (ಅ.ಪೋ.ಕೃ 1:8) ಮತ್ತು ಲೋಕದ ಅಂತ್ಯದ ತನಕ ಸಾಕ್ಷಿಗಳಾಗಿ ಇರಬೇಕಾಯಿತು. "ಈ ಎರಡೂ ಹಂತಗಳನ್ನು ತಲುಪುವ ತನಕ ನಾವು ವಿಶ್ರಾಂತಿಯನ್ನು ತೆಗೆದುಕೊಳ್ಳುವ ಹಾಗೆ ಇಲ್ಲ."
ಜಾನ್ ಅರ್. ಡಬ್ಲ್ಯೂ. ಸ್ಟಾಟ್, *ಮೆಸ್ಸಜೆಸ್ ಆಫ್ ಅಕ್ಟ್ಸ್ , ದಿ ಸ್ಪಿರಿಟ್ ಅಂಡ್ ದಿ ವರ್ಲ್ಡ್* , ಪುಟ 44.

"ಯೇಸುವು ಶಿಷ್ಯರಿಗೆ ನೀಡದ ಕೆಲಸದಲ್ಲಿ ಎಲ್ಲರೂ ಭಾಗಿಯಾಗಿದ್ದೇವೆ. ಕ್ರಿಸ್ತನ ಕಾಲದಲ್ಲಿ ಇದ್ದ ಶಿಷ್ಯರು ಮತ್ತು ಕೊನೆಯ ಕಾಲದಲ್ಲಿ ಬರಲಿರುವ ಶಿಷ್ಯರು ಅದು ಒಳಗೊಂಡಿರುತ್ತದೆ. ಅಭಿಷೇಕ ಹೊಂದಿದ ಬೋಧಕರ ಮೇಲೆ ಮಾತ್ರ ಆತ್ಮಗಳ ಭಾರವನ್ನು ಹೊರಿಸಲಾಗಿದೆ ಎಂದು ಭಾವಿಸುವುದು ಬಹಳ ದೊಡ್ಡ ತಪ್ಪು. ಯಾರಿಗೆ ಪರಲೋಕದ ಸಂದೇಶವನ್ನು ನೀಡಲಾಗಿದೆಯೋ ಅವರೆಲ್ಲರ ಮೇಲೆ ಸುವಾರ್ತೆಯ ನಂಬಿಕೆ ಹೊರಿಸಲ್ಪಟ್ಟಿದೆ. ಯಾರು ಕ್ರಿಸ್ತನ ಜೀವನವನ್ನು ಹೊಂದಿದ್ದಾರೋ ಅವರು ಇತರರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ಅಭಿಷೇಕವನ್ನು ಹೊಂದಿದ್ದಾರೆ. ಈ ಕೆಲಸಕ್ಕಾಗಿಯೇ ದೇವರು ಸಭೆಯನ್ನು ಸ್ಥಾಪಿಸಿದ್ದಾನೆ, ಮತ್ತು ಯಾರು ಪವಿತ್ರವಾದ ಪ್ರಮಾಣಗಳನ್ನು ಹೊಂದಿದ್ದಾರೋ ಅವರೆಲ್ಲರೂ ಕೂಡ ಕ್ರಿಸ್ತನ ಜೊತೆ ಕೆಲಸಗಾರರಾಗಿದ್ದಾರೆ." ಎಲೆನ್ ಜಿ ವೈಟ್, *ದಿ ಡಿಸೈರ್ ಆಫ್ ಎಜಸ್*, ಪುಟ 822.

**ಚರ್ಚಿಸಬೇಕಾದ ಪ್ರಶ್ನೆಗಳು**

1. ಅ.ಪೋ.ಕೃ 1:7 ಮತ್ತು ಮಾರ್ಕ 13:32 ರಲ್ಲಿ ಹೇಳುವ ಪ್ರಕಾರ "ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವುದೇ ಹೊರೆತು ಮತ್ತಾರಿಗೂ ತಿಳಿಯದು. ಪರಲೋಕದಲ್ಲಿರುವ ದೂತರಿಗೂ ತಿಳಿಯದು." ಇದರ ಕುರಿತಾಗಿ ಎಲೆನ್ ಜಿ ವೈಟ್ ಮ್ಮ ನವರು "ಸಮಯದ ಕುರಿತಾಗಿ ದೇವರು ಇನ್ನೂ ಎಂದಿಗೂ ಯಾವ ರೀತಿಯ ಸಂದೇಶವನ್ನು ನೀಡುವುದಿಲ್ಲ ಆತ್ಮದ ಸುರಿಸುವಿಕೆ ಮತ್ತು ಕ್ರಿಸ್ತನ ಎರಡನೇಯ ಬರೋಣದ ಕುರಿತಾದ ನಿರ್ಧಿಷ್ಟವಾದ ಸಮಯದ ಕುರಿತಾಗಿ ನಾವು ಚಿಂತಿಸಬೇಕಾಗಿಲ್ಲ. *ಸೆಲೆಕ್ಟೆಡ್ ಮೆಸ್ಸಜಸ್* ಸಂಪುಟ 1 ಪುಟ 188. ಇದಕ್ಕೆ ಜೊತೆಯಾಗಿ ಆಕೆಯು ಹೀಗೆ ಹೇಳುತ್ತಾರೆ; "ಆ ಬರೋಣದ ಕುರಿತಾಗಿ ಯಾರಾದರೂ ಸಮಯ ಮತ್ತು

ದಿನಾಂಕವನ್ನು ನಿಗದಿ ಪಡಿಸಿದರೆ ದೇವರು ಅವರಿಗೆ ತಿಳಿಸದೆ ಇರುವ ಸಂದೇಶವನ್ನು ಸಾರುವ ಶಾಪವನ್ನು ಪಡೆಯುವರು" *ಅಡ್ವೆಂಟ್ ರಿವ್ಯೂ ಅಂಡ್ ಸಬ್ಬತ್ ಹೆರಾಲ್ಡ್* ಸೆಪ್ಟೆಂಬರ್ 12. 1893. ಇಂತಹ ಮಾತುಗಳ ಔಚಿತ್ಯ ಈ ದಿನಗಳಲ್ಲಿ ಎಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ?

2. "ದೇವರು ನ್ಯಾಯವಾದಿಗಳಿಗಿಂತ ಹೆಚ್ಚಾಗಿ ಸಾಕ್ಷಿ ನುಡಿಯಬೇಕು" ಎಂದು ಯಾರೋ ಹೇಳಿದ್ದಾರೆ. ಈ ಮಾತಿನ ಕುರಿತಾಗಿ ನೀವು ಏನು ಹೇಳುತ್ತಿರಿ?

3. ಆದಿ ಸಭೆಯಲ್ಲಿ ಪ್ರಾರ್ಥನೆಯ ಪಾತ್ರ ಏನಾಗಿತ್ತು?ಆ ಸಭೆಯ ಮುಖ್ಯವಾದ ತಿರ್ಮಾನಗಳ ಸಮಯದಲ್ಲಿ ಪ್ರಾರ್ಥನೆಯ ಉಲ್ಲೇಖವನ್ನು ಕಾಣುವುದು ಯಾದೃಚ್ಚಿಕವಲ್ಲವೇ? (ಅ.ಪೋ.ಕೃ 1:24, 8:14-17; 9:11,12; 10:4,9, 30: 13:2) ನಿಮ್ಮ ಜೀವನದಲ್ಲಿ ಪ್ರಾರ್ಥನೆಯ ಪಾತ್ರ ಏನಾಗಿದೆ?

****